<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸವಣೂರು.</u>

<u>ಸಿ.ಸಿ ಸಂಖ್ಯೆ: **323/2016**</u>

ಪಿಡಬ್ಲ್ಯೂ: 01 ಸಿಡಬ್ಲ್ಯೂ : 01
ದಿನಾಂಕ: 20-07-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಸುರೇಶ ಮರಡೂರು |
| ತಂದೆ/ಗಂಡನ ಹೆಸರು | - ಬಸಪ್ಪ ಮರಡೂರು |
| ವಯಸ್ಸು | - 55 ವರ್ಷ |
| ಉದ್ಯೋಗ | - ವ್ಯವಸಾಯ |
| ವಾಸ ಸ್ಥಳ | - ಹೆಸರೂರು |

<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ.</u>

ಚಾಸಾ-4 ನನ್ನ ಹೆಂಡತಿ. ಚಾಸಾ-5, 6 ನನ್ನ ಮಕ್ಕಳು. ಚಾಸಾ-7 ರಿಂದ 10 ಇವರ ಪರಿಚಯ ನನಗೆ ಇದೆ. ಆರೋಪಿತರ ಪರಿಚಯ ಇದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ತಾನು ನೀಡಿದ ಫಿರ್ಯಾದಿ ಆಗಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಫಿರ್ಯಾದಿಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಸಹಿ ಮಾತ್ರ ಮಾಡಿದ್ದೇನೆ.

ಸಾಕ್ಷಿಗೆ ಅಪರಾಧ ಜಾಗದ ಪಂಚನಾಮೆಯನ್ನು ತೋರಿಸಿದ್ದು ಅದರಲ್ಲಿ ತನ್ನ ಸಹಿ ಇರುವುದಿಲ್ಲ ಆದರೆ ಭಾವಚಿತ್ರದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ಪಂಚನಾಮೆ 1 ಮತ್ತು 2 ನ್ನು ಯಾವಾಗ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಘಟನಾ ಜಾಗವನ್ನು ತೋರಿಸಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಭಾವಚಿತ್ರವನ್ನು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆಮಾಲನ್ನು ಸಾಕ್ಷಿಯು ನೋಡಿ ಗುರುತಿಸಿರುವುದಿಲ್ಲ.

**(**ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಲಾಯಿತು.**)**

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದ.</u>

ನಾನು ಸುರೇಶ ಬಸಪ್ಪ ಮರಡೂರ, ವಯಸ್ಸು 50................ ತಡವಾಗಿ ಬಂದು ಈಗ ಫಿರ್ಯಾದಿ ಕೊಟ್ಟಿದ್ದೇನೆ. ಈ ಮೇಲೆ ಓದಿ ಹೇಳಿದ ರೀತಿಯಲ್ಲಿ ನೀವು ಆರೋಪಿತರ ವಿರುದ್ಧ ಫಿರ್ಯಾದಿಯನ್ನು ನೀಡಿರುತ್ತೀರಿ ಎಂದರೆ ಸರಿ ಅಲ್ಲ. ದಿನಾಂಕ 01-07-2015 ರಂದು ಮಧ್ಯಾಹ್ನ 2.30 – 3.30 ರ ತನಕ ಚಾಸಾ-2, 3 ರವರ ಸಮಕ್ಷಮ ನಾನು ತೋರಿಸಿದ ಜಾಗದಲ್ಲಿ ಪೊಲೀಸರು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಆ ವೇಳೆಯಲ್ಲಿ ಮು.ಮಾ.ಗಳನ್ನು ಜಪ್ತು ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ದಿನಾಂಕ 01-07-2015 ರಂದು ಸಂಜೆ 5.00 – 5.45 ರ ತನಕ ಚಾಸಾ-2, 3 ರವರ ಸಮಕ್ಷಮ ನಾನು ತೋರಿಸಿದ ಜಾಗದಲ್ಲಿ ಪೊಲೀಸರು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಆ ವೇಳೆಯಲ್ಲಿ ಮು.ಮಾ.ಗಳನ್ನು ಜಪ್ತು ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಪಂಚನಾಮೆಗಳಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

ನೀವು ಆರೋಪಿತರ ವಿರುದ್ಧ ಫಿರ್ಯಾದನ್ನು ನೀಡಿದ್ದು, ಪೊಲೀಸರು ಪಂಚರ ಸಮಕ್ಷಮ ನೀವು ತೋರಿಸಿದ ಜಾಗದಲ್ಲಿ ಪಂಚನಾಮೆ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿ ಅಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ ಅಲ್ಲ. ಆರೋಪಿತರು ನನಗಾಗಲಿ ನನ್ನ ಮನೆಯವರಿಗಾಗಲಿ ಹೊಡೆಬಡೆ ಮಾಡಿರುವುದಿಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ ಅಲ್ಲ.

<u>ಪಾಟೀ ಸವಾಲುಃ ಆರೋಪಿತರು ವಕೀಲರ ಮುಖಾಂತರ ಹಾಜರಾಗದೇ ತಾವುಗಳೇ ಕೇಸನ್ನು ನಡೆಸುತ್ತೇವೆ ಎಂದು ನುಡಿದಿರುತ್ತಾರೆ.</u>

ರಾಜಕೀಯ ಒತ್ತಡವಾಗಿ ನೀವು ದೂರನ್ನು ನೀಡಿದ್ದೀರ ಎಂದರೆ ಸರಿ ಅಲ್ಲ. ಆಸ್ತಿ ಸಲುವಾಗಿ ರಾಜಕಾರಣಿಗಳು ನಿಮ್ಮನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದರೆ ಸರಿ ಅಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ ಅಲ್ಲ. ಶೃತಿ ಕೆಂಚಣ್ಣನವರ ಹಣವನ್ನು ಕೊಳ್ಳೆ ಹೊಡೆಯುವ ಹೊಡೆಯುವ ಸಲುವಾಗಿ ರಾಜಕೀಯ ವ್ಯಕ್ತಿಗಳ ಒತ್ತಡದ ಮೇರೆಗೆ ಸುಳ್ಳು ಫಿರ್ಯಾದಿ ಸಲ್ಲಿಸಿದ್ದೀರಿ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ</u> ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.